# ಕುಡಿಯ ಬದಲಾವಣೆಗೆ ನೊಂದು ಮೌನವಾದ ಕರುಳು

ಒಂದು ದಿನ ಭಾನುವಾರ ಮೂವರೂ ಕೋಣೆಯೊಳಗೆ ಸೇರಿಕೊಂಡು ಹಾಡು ಹಾಕಿಕೊಂಡು ಕುಣಿದು ಕುಪ್ಪಳಿಸುತ್ತಿದ್ದಾರೆ. ಊಟಕ್ಕೆ ಬನ್ನಿ ಅಂತ ಕರೆಯುತ್ತಿದ್ದರೂ ಬಾರದಿದ್ದಾಗ ಭಾಸ್ಕರನೇ ಎದ್ದು ರೂಮಿನ ಬಾಗಿಲು ಬಡಿದ, ತಕ್ಷಣಕ್ಕೆ ಬಾಗಿಲು ತೆಗೆಯದೇ ಇದ್ದಾಗ ಜೋರಾಗಿ ಬಾಗಿಲು ಬಡಿದು 'ಬನ್ರೋ ಊಟ ಮಾಡಿ' ಅಂತ ಕಿರುಚಿದ. ಗಾಬರಿಗೊಂಡು ಬಾಗಿಲು ತೆಗೆದ ತರುಣ್ ವೀರೂ ಹುಡುಗಿಯ ವೇಷದಲ್ಲಿ ಇದ್ದಾನೆ ಅಂತ ಆ ಕ್ಷಣಕ್ಕೆ ಮರೆತು ಬಿಟ್ಟ. ಒಳ ಬಂದ ಭಾಸ್ಕರ ಹೆಣ್ಣಿನ ವೇಷದಲ್ಲಿ ಇದ್ದ ವೀರುವನ್ನು ನೋಡಿ 'ಅಯ್ಯೊ ಇದು ವೀರೂನಾ, ಹುಡುಗಿ ತರಾನೇ ಕಾಣ್ತಾ ಇದ್ದೀಯಲ್ಲ, ಬಾ ನಿಮ್ಮ ಅತ್ತೆನೂ ನೋಡಲಿ' ಅಂತ ನಗುತ್ತಾ ಅವನನ್ನು ಕೈಗಳಿಂದ ಬಳಸಿ ಹೊರಗೆ ಕರೆದುಕೊಂಡು ಬಂದ. 'ಸುಧಾ ನೋಡು ನನ್ನ ಅಳಿಯನನ್ನು, ಸೊಸೆ ಆಗಿ ಬಿಟ್ಟಿದ್ದಾನೆ ಈಗ' ಅಂತ ವೀರುವನ್ನು ತೋರಿಸಿ ತಮಾಷೆ ಮಾಡಿದ. ಸುಧಾ ಅಡುಗೆ ಮನೆಯಿಂದ ಹೊರ ಬಂದು ವೀರುವನ್ನು ನೋಡಿ 'ಅಯ್ಯೊ ಎಷ್ಟು ಚೆನ್ನಾಗಿ ಕಾಣ್ತಾ ಇದ್ದಿಯಲ್ಲೊ, ನನ್ನ ದೃಷ್ಟಿನೇ ತಗುಲತ್ತೆ, ನಿಮ್ಮ ಮನೆಯಲ್ಲಿ ಹೆಣ್ಣು ಮಕ್ಕಳು ಕಡಿಮೆ ಅಂತ ನೀನೂ ಹೆಣ್ಣಾಗಲು ಹೊರಟಿದ್ದಿಯಾ' ಎಂದು ನುಡಿದಾಗ ವೀರೂ ಬೆಚ್ಚಿದ. ಅವನ ಭಯ ಮುಖದಲ್ಲಿ ಕಾಣಿಸಿದಾಗ ಸುಧಾ ಹೆದರಬೇಡವೋ ಯಾವತ್ತೊ ಒಂದು ದಿನ ಹಾಕ್ಕೊಂಡ್ರೆ ಏನೂ ಆಗಲ್ಲ ಬಿಡೊ, ಚೆನ್ನಾಗಿ ಕಾಣುತ್ತೆ ಅಂತ ಅದೇ ಅಭ್ಯಾಸ ಮಾಡಿಕೊಳ್ಳಬೇಡ. ಆಮೇಲೆ ಏನೋ ಆಗಿಬಿಡ್ತೀಯಾ, ಹುಚ್ಚು ಹುಡುಗರು, ಏನೊ ಆಡಿಕೊಳ್ರೋ ಅಂದ್ರೆ ಹುಡುಗಿ ವೇಷ ಹಾಕ್ಕೊಂಡು ಆಡ್ತಾರೆ, ಹೋಗೋ ಮೊದಲು ನಿನ್ನವತಾರವನ್ನ ಬಿಚ್ಚಿ ಬಾ, ಇವತ್ತಿಗೆ ಈ ವೇಷ ಕೊನೆಯಾಗಲಿ ಆಯ್ತಾ' ಎಂದ ಸುಧಾಳಿಗೆ ಯಾಕೊ ವೀರೂನಾ ವೇಷ ಸಹಜ ಅನ್ನಿಸಲಿಲ್ಲ. ಆದರೆ ಬಾಯಿ ಬಿಟ್ಟು ಹೇಳಲಾರದೆ ಸುಮ್ಮನಾಗಿಬಿಟ್ಟಳು. ಭಾಸ್ಕರ ಮಾತ್ರ ಇನ್ನೂ ವೀರುವನ್ನು ನೋಡಿ ನಗುತ್ತಲೇ ಇದ್ದ.

ವೀರೂ ಹೈಸ್ಕೂಲ್ ಕೊನೆಯ ವರ್ಷದಲ್ಲಿ ಇದ್ದ. ಶಾಲೆಯ ಸೆಂಡಾಫ್ ದಿನ ಕ್ಲಾಸ್ ಟೀಚರ್ ಈ ಬಾರಿ ಸೆಂಡಾಫ್ ಕಾರ್ಯಕ್ರಮದಲ್ಲಿ ಏನಾದರೂ ವಿಶೇಷವಾಗಿ ಮಾಡಿ ಎಲ್ಲರಿಗೂ ಒಂದು ಸರ್‌ಪ್ರೈಸ್ ಕೊಡೋಣ ಅಂತ ವಿದ್ಯಾರ್ಥಿಗಳಿಗೆ ಹೇಳಿದ್ದರು. ಯಾರಾದರೂ ಹುಡುಗಿಯಂತೆ ಡ್ರೆಸ್ ಮಾಡಿಕೊಂಡು ಆ್ಯಂಕರಿಂಗ್ ಮಾಡಲಿ, ಹೊರಗಡೆಯಿಂದ ಕರೆಸಿದ್ದೇವೆ ಅಂತ ಹೇಳಿ ಎಲ್ಲರನ್ನು ಫೂಲ್ ಮಾಡೋಣ ಅಂತ ಹುರಿದುಂಬಿಸಿದರು. ಮಕ್ಕಳೆಲ್ಲ ಖುಷಿಯಿಂದ ಒಪ್ಪಿದರು. ಯಾರು ಹುಡುಗಿ ವೇಷ ಹಾಕುವುದು ಅಂತ ಆಯ್ಕೆ ಮಾಡಿ ಅಂತ ಮಕ್ಕಳಿಗೆ ಬಿಟ್ಟರು. ವೀರೂವಿಗೆ ಅವನ ಗೆಳೆಯರೆಲ್ಲ ಸೇರಿ ಹೆಣ್ಣಿನ ವೇಷ ಹಾಕಲು ಹೇಳಿದಾಗ ಖುಷಿಯಿಂದಲೇ ಒಪ್ಪಿಕೊಂಡಿದ್ದ. ಅಂದಿನ ಕಾರ್ಯಕ್ರಮದಲ್ಲಿ ಆ್ಯಂಕರಿಂಗ್ ಮಾಡಲು ಸಿದ್ಧವಾಗಿಬಿಟ್ಟ. ಗೆಳೆಯರೆಲ್ಲ ಸೇರಿ ಅವನಿಗೆ ಬೇಕಾದ ಪರಿಕರಗಳನ್ನು ಒದಗಿಸಿದರು. ಹುಡುಗಿಯ ವೇಷ ಹಾಕುವುದು ವೀರುವಿಗೇನು ಹೊಸದಲ್ಲ. ಗೆಳೆಯರ ನೆರವಿನಿಂದ ಸಿದ್ಧವಾಗಿ ಹೊರಬಂದ ವೀರುವನ್ನು ಮೊದಲಿಗೆ ಅವನ ಕ್ಲಾಸ್ ಟೀಚರ್‌ಗೆ ಗುರ್ತಿಸಲಾಗಲಿಲ್ಲ. ಅಷ್ಟು ಚೆನ್ನಾಗಿ ಹುಡುಗಿಯಂತೆ ಕಾಣಿಸುತ್ತಿದ್ದ. ಅವತ್ತಿನ ಕಾರ್ಯಕ್ರಮದಲ್ಲಿ ವೀರು ಬಹಳ ಚೆನ್ನಾಗಿ ನಿರೂಪಣೆ ಮಾಡಿ ಎಲ್ಲರಿಂದ ಮೆಚ್ಚುಗೆ ಗಳಿಸಿದ. ಎಲ್ಲರಿಗೂ ಅದು ಹುಡುಗ ಅಂತ ಗೊತ್ತಾಗದೆ ಹೊರಗಿನಿಂದ ಕರೆಸಿದ ಆ್ಯಂಕರ್ ಅಂತಲೇ ಭಾವಿಸಿಬಿಟ್ಟರು.

ಕಾರ್ಯಕ್ರಮ ಮುಗಿದ ಮೇಲೆ ವೀರುವನ್ನು ವೇಷ ಬದಲಿಸಲು ಬಿಡದೆ ಹಾಗೆ ಹೊರಗೆ ಕರೆದುಕೊಂಡು ಹೋಗಿ ಪಾರ್ಟಿ ಮಾಡಿ ಮನೆಗೆ ಕರೆದುಕೊಂಡು ಬಂದು ಬಿಟ್ಟು ಹೋದರು. ಅವನು ಯಾವ ಸಂಕೋಚವೂ ಇಲ್ಲದೆ ಬಹಳ ಖುಷಿಯಿಂದ ಮನೆಗೆ ಬಂದಾಗ ವಾರಿಜ ಮನೆಯಲ್ಲಿ

